# ಸ್ವಾಮಿ ವಿವೇಕಾನಂದರ ಯುವ ದಿನಗಳು

**ಬಜೇಂದ್ರನಾಥ್ ಸೀಲ್**

*ಅನುವಾದ: ಸ್ವಾಮಿ ನಿತ್ಯಸ್ಥಾನಂದ*



*ಸ್ವಾಮಿ ವಿವೇಕಾನಂದರ ಸ್ಮೃತಿ ಚಿತ್ರಗಳ ಸಂಕಲನ ಗ್ರಂಥ 'The Reminiscences of Swami Vivekananda ' ಇದರ ಹೊಸ ಆವೃತ್ತಿಯಲ್ಲಿ (೨೦೧೮) ಸೇರ್ಪಡೆಗೊಂಡಿರುವ ಲೇಖನದ ಅನುವಾದ ಇದು. ಲೇಖಕರು ಪ್ರಸಿದ್ಧ ತತ್ತ್ವಜ್ಞಾನಿಗಳು; ಬ್ರಾಹ್ಮೋ ಚಳವಳಿಯ ನೇತಾರರು. ಅವರು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಗಮನಾರ್ಹ ಸೇವೆ ಸಲ್ಲಿಸಿದ್ದರು. ಈ ಲೇಖನದಲ್ಲಿ ಸ್ವಾಮೀಜಿಯವರ ವಿದ್ಯಾರ್ಥಿ ಜೀವನದ ಹಲವು ವಿಶಿಷ್ಟ ಮಾಹಿತಿಗಳು ಉಲ್ಲೇಖಗೊಂಡಿವೆ. ಅನುವಾದಕರು ಈ 'ವಿವೇಕ ಪ್ರಭ'ದ ಪ್ರಥಮ ಸಂಪಾದಕರಾಗಿದ್ದವರು; ಪ್ರಸ್ತುತ ದಾವಣಗೆರೆ ಮಿಷನ್ ಆಶ್ರಮದ ಅಧ್ಯಕ್ಷರಾಗಿದ್ದಾರೆ.*

ನಾನು ಮೊದಲು ವಿವೇಕಾನಂದರನ್ನು ಭೇಟಿಯಾದದ್ದು ೧೮೮೧ರಲ್ಲಿ. ಜನರಲ್ ಅಸೆಂಬ್ಲಿಯ ಕಾಲೇಜಿನಲ್ಲಿ ನಾವಿಬ್ಬರೂ ವಿದ್ಯಾರ್ಥಿಗಳಾಗಿದ್ದೆವು ಮತ್ತು ಕಾಲೇಜಿನ ಪ್ರಾಂಶುಪಾಲರು ವಿದ್ವಾಂಸರೂ, ತತ್ತ್ವಜ್ಞಾನಿಗಳೂ ಕವಿಗಳೂ ಆದ ವಿಲಿಯಂ ಹೇಸ್ಟಿ. ವಯಸ್ಸಿನಲ್ಲಿ ಅವರು(ವಿವೇಕಾನಂದರು) ನನಗಿಂತ ಹಿರಿಯರು, ಆದರೆ ನಾನು ಕಾಲೇಜಿನಲ್ಲಿ ಒಂದು ವರ್ಷ ಹಿರಿಯವನಾಗಿದ್ದೆ. ಅವರೊಬ್ಬರು ಪ್ರತಿಭಾನ್ವಿತ ಯುವಕ ಎನ್ನುವುದನ್ನು ಅಲ್ಲಗೆಳೆಯುವಂತೆಯೇ ಇಲ್ಲ. ಎಲ್ಲರೊಡನೆ ಮುಕ್ತವಾಗಿ ಬೆರೆಯಬಲ್ಲ ವ್ಯಕ್ತಿ. ನಡೆನುಡಿಗಳಲ್ಲಿ ರೂಢಿಬದ್ಧರಾಗಿರಲಿಲ್ಲ. ಮಧುರವಾಗಿ ಹಾಡುತ್ತಿದ್ದರು. ಸ್ನೇಹಿತರ ನಡುವೆ ಯಾವಾಗಲೂ ಕೇಂದ್ರವ್ಯಕ್ತಿಯಾಗಿರುತ್ತಿದ್ದರು. ಸಂಭಾಷಣೆಯಲ್ಲಿ ಮಿಂಚುಹೊಳೆದಂತೆ ಮಾತನಾಡುತ್ತಿದ್ದರು. ಸ್ವಲ್ಪಮಟ್ಟಿಗೆ ಕಟು ವಿಮರ್ಶಕರೂ ಕೂಡ. ಪ್ರಪಂಚದ ತೋರಿಕೆಯ ಹಾಸ್ಯಾಸ್ಪದ ರೀತಿನೀತಿಗಳನ್ನು ತುಂಬ ಹಾಸ್ಯಮಯವಾಗಿ ಲೇವಡಿ ಮಾಡುತ್ತಿದ್ದರು. ಈ ಎಲ್ಲ ಸಂಶಯಾತ್ಮಕ ದೃಷ್ಟಿಯ ಹಿಂದೆ ಮೃದುಹೃದಯ ಅಡಗಿಕೊಂಡಿತ್ತು. ತುಂಬ ಅಸಾಂಪ್ರದಾಯಿಕರೂ ವೈಚಾರಿಕರೂ ಆಗಿದ್ದರು. ಅಸಾಂಪ್ರದಾಯಿಕರಲ್ಲಿ ಸಾಮಾನ್ಯವಾಗಿ ಕಂಡುಬರದ ಉಕ್ಕಿನ ಇಚ್ಛಾ ಶಕ್ತಿ ಅವರಲ್ಲಿತ್ತು. ತುಂಬ ದೃಢತೆಯಿಂದ ಪ್ರಭುತ್ವಪೂರ್ಣವಾಗಿ ಅವರು ಮಾತನಾಡು ತ್ತಿದ್ದರು. ಅವರ ಕಣ್ಣಿನಲ್ಲಿ ಏನೋ ಒಂದು ವಿಶಿಷ್ಟ ಶಕ್ತಿಯಿತ್ತು, ಅದು ಕೇಳುಗರನ್ನು ಮಂತ್ರಮುಗ್ಧರನ್ನಾಗಿಸುತ್ತಿತ್ತು.

ಇದು ಎಲ್ಲರಿಗೂ ವೇದ್ಯವಾಗುವ ವಿಷಯ. ಆದರೆ ಎಲ್ಲರ ಗಮನಕ್ಕೆ ಬರದ ಒಂದು ಅಂಶ ಅವರಲ್ಲಿತ್ತು — ಅದು ಅವರ ಆಂತರಿಕ ಹೋರಾಟ. ಆ ತೀವ್ರ ಆಂತರಿಕ ತುಡಿತ ಅವರನ್ನು ಚಡಪಡಿಸುವಂತೆ ಮಾಡುತ್ತಿತ್ತು, ಸುಮ್ಮನಿರಲು ಬಿಡುತ್ತಿರಲಿಲ್ಲ.

ಇದು ಅವರ ಮಾನಸಿಕ ಇತಿಹಾಸದ ಸಂದಿಗ್ಧ ಸಮಯದ ಪ್ರಾರಂಭಾವಸ್ಥೆ. ಈ ಅವಧಿಯಲ್ಲಿ ಅವರ ಸ್ವಪ್ರಜ್ಞೆ ಜಾಗೃತವಾಗಿ ಅವರು ತಮ್ಮ ಭವಿಷ್ಯ ವ್ಯಕ್ತಿತ್ವಕ್ಕೆ ತಳಹದಿ ಹಾಕಿದರು. ಜಾನ್ ಸ್ಟುವರ್ಟ್ ಮಿಲ್‌ರವರ 'ಧರ್ಮದ ಮೇಲಿನ ಮೂರು ಪ್ರಬಂಧಗಳ'ನ್ನು ('Three Essays on Religion') ಅವರು ಓದಿದಾಗ ಅವರ ಹಳೆಯ ನಂಬಿಕೆ ಬುಡಮೇಲಾಯಿತು. ಜಗತ್ತು ಭಗವಂತನ ಸೃಷ್ಟಿ ಎಂಬ ವಾದವು ಅವರ ಪಾಲಿಗೆ ಯುಕ್ತಿಯುಕ್ತತೆಯನ್ನು ಕಳೆದುಕೊಂಡಿತು. ಜಗತ್ತಿನಲ್ಲಿರುವ ಕೆಡುಕಿನ ಸಮಸ್ಯೆ

ಅವರನ್ನೀಗ ಕಾಡತೊಡಗಿತು. ಸರ್ವಜ್ಞನೂ ದಯಾಮಯನೂ ಆದ ಭಗವಂತನ ಸೃಷ್ಟಿಯಲ್ಲಿ ದುಃಖ-ಕೆಡಕುಗಳಿಗೆ ಎಡೆಯೆಲ್ಲಿ ಎಂಬ ಪ್ರಶ್ನೆ ಬೃಹದಾಕಾರವಾಗಿ ಅವರ ಮುಂದೆ ನಿಂತಿತು. ಇದೇ ಸಂದರ್ಭದಲ್ಲಿ ಸ್ನೇಹಿತನೊಬ್ಬನು ಹ್ಯೂಮ್‌ರ ಸಂಶಯವಾದವನ್ನೂ (Scepticism) ಮತ್ತು ಹರ್ಬರ್ಟ್ ಸ್ಪೆನ್ಸರ್ ಅವರ ಅಜ್ಞೇಯತಾವಾದವನ್ನೂ ಅಧ್ಯಯನ ಮಾಡಲು ಸೂಚಿಸಿದನು. ಈ ಎಲ್ಲ ಅಧ್ಯಯನಗಳ ಪರಿಣಾಮವಾಗಿ ಅವರ ನಾಸ್ತಿಕಭಾವ ಕ್ರಮೇಣ ತಾತ್ತ್ವಿಕ ಸಂಶಯವಾದವಾಗಿ ಪರಿಣಮಿಸಿತು.

ಅವರ ಪ್ರಾರಂಭಾವಸ್ಥೆಯ ಭಾವಪ್ರವಣತೆ ಮತ್ತು ಮುಗ್ಧತೆ ಈಗ ಕಣ್ಮರೆಯಾಗತೊಡಗಿದವು. ಒಂದು ರೀತಿಯ ಶುಷ್ಕತೆ ಮತ್ತು ಭಕ್ತಿ-ಪ್ರಾರ್ಥನೆಗಳ ಅಸಮರ್ಥತೆ — ಇವು ಅವರನ್ನು ಆವರಿಸಿದವು. ನಿರ್ವಿಣ್ಣತೆ ಅವರ ಅಂತರಂಗವನ್ನು ಕಾಡುತ್ತಿತ್ತು. ಅದನ್ನು ಅವರು ನಿರ್ಭೀತಿಯಿಂದ ಎಲ್ಲವನ್ನೂ ಅಪಹಾಸ್ಯ ಮಾಡುವ ತಮ್ಮ ಸ್ವಭಾವದಿಂದ ಮುಚ್ಚಿಕೊಂಡಿದ್ದರು. ಆದರೆ ಸಂಗೀತವೊಂದೇ ಈಗ ಅವರ ಅಂತರಂಗವನ್ನು ಕಲಕಲು ಸಮರ್ಥವಾಗಿತ್ತು . ಅದರ ಮೂಲಕ ಅತೀತ ಸತ್ಯದ ಭಾವಸ್ಪರ್ಶವಾಗಿ ಅವರ ಕಣ್ಣು ಹನಿಗೂಡುತ್ತಿತ್ತು.

ಈ ಸಮಯದಲ್ಲಿಯೇ ಅವರು ನನ್ನೆಡೆಗೆ ಬಂದರು. ಹ್ಯೂಮ್ ಮತ್ತು ಹರ್ಬರ್ಟ್ ಸ್ಪೆನ್ಸರ್ ಇವರನ್ನು ಅವರಿಗೆ ಪರಿಚಯಿಸಿದ ಅದೇ ಸ್ನೇಹಿತನೇ ಅವರನ್ನು ನನ್ನ ಹತ್ತಿರ ಕರೆದುಕೊಂಡು ಬಂದಿದ್ದು. ಇದಕ್ಕೆ ಮುಂಚೆ ನನಗೆ ಅವರ ಸ್ವಲ್ಪ ಪರಿಚಯವಿತ್ತು. ಆದರೆ ಈಗ ಅವರು ತಮ್ಮ ಅಂತರಂಗವನ್ನು ನನ್ನ ಮುಂದೆ ತೆರೆದಿಟ್ಟರು — ತಮ್ಮನ್ನು ಪೀಡಿಸುತ್ತಿರುವ ಸಂದೇಹಗಳನ್ನೂ ಆತ್ಯಂತಿಕ ಸತ್ಯವನ್ನು ಕುರಿತಾಗಿ ಯಾವುದೇ ನಿರ್ಣಯಕ್ಕೆ ಬರಲಾಗದ ತಮ್ಮ ಸ್ಥಿತಿಯನ್ನೂ ಹೇಳಿಕೊಂಡರು. ಭಗವದಸ್ತಿತ್ವಕ್ಕೆ ಸಂಬಂಧಿಸಿದ ವಿಷಯಗಳನ್ನು ತಿಳಿಯಲು ತಮ್ಮ ಈ ಸ್ಥಿತಿಗೆ ಸೂಕ್ತವಾದ ಕೆಲವು ಧಾರ್ಮಿಕ ಗ್ರಂಥಗಳನ್ನು ಸೂಚಿಸಬೇಕೆಂದು ಅವರು ಕೇಳಿಕೊಂಡರು. ನಾನು ಕೆಲವು ಗ್ರಂಥಗಳನ್ನು ಸೂಚಿಸಿದೆ. ಆದರೆ ಸಂಸ್ಥಾಬದ್ಧ ಮತೀಯ ವಿಚಾರಗಳು ಅವರ ಸಂದೇಹವನ್ನು ಇನ್ನೂ ಸಮರ್ಥಿಸಿದವು. ಅಲ್ಲದೆ, ನೀರಸ ಓದಿನಲ್ಲಿ ಅವರಿಗೆ ಯಾವುದೇ ಆಸಕ್ತಿ ಇರುವಂತೆ ಕಂಡುಬರಲಿಲ್ಲ. ಅವರ ಮನದಾಸೆ ಸತ್ಯವನ್ನು ಅನುಭವಿಸಬೇಕೆಂಬುದು. ಆದ್ದರಿಂದ ಅನುಭಾವಿಗಳ ಸಂಪರ್ಕ ಅವರಿಗೆ ಆವಶ್ಯಕವಾಗಿತ್ತು. ಪುಸ್ತಕಗಳಿಂದ ಅವರಿಗೆ ಯಾವುದೇ ಸ್ಫೂರ್ತಿ ದೊರೆಯುವಂತಿರಲಿಲ್ಲ. ಅವರಿಗೆ ಬೇಕಾದುದು ಜೀವ ಕೆರಳಿಸುವ ಜೀವ, ಚಿಂತನೆಯನ್ನು ಪ್ರಜ್ವಲಿಸುವ ಚಿಂತನೆಗಳು.

ಅವರು ನನಗೆ ತುಂಬ ಆಕರ್ಷಕರಾದರು. ಏಕೆಂದರೆ ಆಗ ನನಗೆ ತಿಳಿಯಿತು, ಅವರು ಅತ್ಯಂತ ಪ್ರಾಮಾಣಿಕವಾಗಿ ಈ ಸಮಸ್ಯೆಗಳನ್ನು ಎದುರಿಸುತ್ತಾರೆ ಎಂದು.

ಷೆಲ್ಲಿಯ ಪುಸ್ತಕಗಳನ್ನು ಒಂದೊಂದಾಗಿ ಅವರಿಗೆ ಓದಲು ಕೊಟ್ಟೆ. ಷೆಲ್ಲಿಯ ಚೈತನ್ಯಾತ್ಮಕ ಬೌದ್ಧಿಕ ಸೌಂದರ್ಯ ಸ್ತುತಿ, ವಿಶ್ವದೇವೈಕ್ಯವಾದ, ಸಾರ್ವತ್ರಿಕ ಪ್ರೀತಿ, ವೈಭವಯುತ ಸ್ವರ್ಗೀಯ ಮಾನವಕೋಟಿಯ ದರ್ಶನ — ಇವುಗಳಿಂದ ವಿವೇಕಾನಂದರು ಹೆಚ್ಚು ಆಕರ್ಷಿತರಾದರು; ತತ್ತ್ವಜ್ಞಾನಿಗಳ ವಿಚಾರಪೂರ್ಣ ವಾದಗಳು ಅವರನ್ನು ಒಲಿಸಲು ಅಸಮರ್ಥವಾದವು. ಜಗತ್ತು ಅವರ ಪಾಲಿಗೆ ನಿರ್ಜೀವ, ನಿಷ್ಪ್ರೇಮ, ಯಾಂತ್ರಿಕ ವಸ್ತುವಾಗಿ ಉಳಿಯಲಿಲ್ಲ. ಅದರ ಹಿಂದೆ ಆಧ್ಯಾತ್ಮಿಕ ತತ್ತ್ವದ ಐಕ್ಯತೆ ಇದೆ.

ಷೆಲ್ಲಿಯವರ ಐಕ್ಯತೆಯ ಕಲ್ಪನೆಗಿಂತ ಉನ್ನತವಾದ ಐಕ್ಯತೆಯ ಬಗ್ಗೆ ಅಂದರೆ ವಿಶ್ವಚೈತನ್ಯವಾದ ಪರಬ್ರಹ್ಮದ ಕುರಿತಾಗಿ ನಾನು ಅವರಿಗೆ ವಿವರಿಸತೊಡಗಿದೆ. ಆಗ ನನ್ನ ಅಭಿಪ್ರಾಯ ಯಾವುದೆಂದರೆ ಮೂರು ಅಂಶಗಳನ್ನು ಒಂದುಗೂಡಿಸುವುದು. ಅವಾವುವೆಂದರೆ: ವೇದಾಂತದ ಅದ್ವೈತ ತತ್ತ್ವ, ಹೆಗೆಲರ ನಿರಪೇಕ್ಷ ಭಾವನೆ (idea) ಮತ್ತು ಫ್ರೆಂಚ್ ಚಳುವಳಿಯ ಮೂಲಮಂತ್ರವಾದ ಸಮಾನತೆ, ಸ್ವಾತಂತ್ರ್ಯ ಹಾಗೂ ಸೋದರತ್ವ. ನನ್ನ ದೃಷ್ಟಿಯು ವೈಯಕ್ತಿಕತೆಯೇ ಎಲ್ಲ ದೋಷಗಳ ಮೂಲ ಎಂಬುದಾಗಿತ್ತು. ವಿಶ್ವಚೈತನ್ಯವೇ ಸರ್ವಸ್ವ ; ಪ್ರಕೃತಿ, ಜೀವತತ್ವ ಮತ್ತು ಇತಿಹಾಸ — ಇವು ನಿರಪೇಕ್ಷ ಭಾವನೆಯ ಪ್ರಗತಿಪರ ಅಭಿವ್ಯಕ್ತಿ. ಎಲ್ಲ ನೈತಿಕ, ಸಾಮಾಜಿಕ, ಹಾಗೂ ರಾಜಕೀಯ ಸಿದ್ಧಾಂತಗಳು ಮತ್ತು ತತ್ತ್ವಗಳು ಶುದ್ಧ ಚೈತನ್ಯದೊಡನೆ ಹೊಂದಿಕೊಳ್ಳುವಂತಿರಬೇಕು. ಭಾವಪ್ರವಣತೆ ನನ್ನ ಪಾಲಿಗೆ ಮಾನಸಿಕ ದೌರ್ಬಲ್ಯವಾಗಿತ್ತು. ದ್ರವ್ಯವಸ್ತು, ವೈಯಕ್ತಿಕತೆ ಮತ್ತು ಅವಿಚಾರತೆ ಇವುಗಳ ಪ್ರತಿರೋಧವನ್ನು ಜಯಿಸಿ ಶುದ್ಧಚೈತನ್ಯದ ಅಭಿವ್ಯಕ್ತಿಯನ್ನು ಸಾಧ್ಯಗೊಳಿಸುವುದೇ ಜೀವನದ, ಸಮಾಜದ, ಶಿಕ್ಷಣದ ಹಾಗೂ ರಾಜಕೀಯದ ಬಹುದೊಡ್ಡ ಸಮಸ್ಯೆ. ಸಮಾನತೆ, ಸ್ವಾತಂತ್ರ್ಯ ಮತ್ತು ಸೋದರತ್ವ — ಈ ಉದಾತ್ತ ಆದರ್ಶದಿಂದ ಕೂಡಿದ ಹೊಸ ರಾಜಕೀಯ ಆಂದೋಲನದಿಂದ ಜನಾಂಗವನ್ನು ಅವಿಚಾರದ ಬಂಧನದಿಂದ ಮುಕ್ತಗೊಳಿಸಬಹುದು ಎಂಬುದು ನನ್ನ ದೃಢ ನಂಬಿಕೆಯಾಗಿತ್ತು. ಅನನುಭವಿ ಯುವಕನ ಉತ್ಸಾಹದೊಂದಿಗೆ ನಾನು ಈ ನಂಬಿಕೆಗೆ ಕಟಿಬದ್ಧನಾಗಿದ್ದೆ.

ವೈಯಕ್ತಿಕತೆಯ ನಿಷೇಧ ಹಾಗೂ ವಿಶ್ವಚೈತನ್ಯದ ಸಾರ್ವಭೌಮತ್ವ — ಇದೇ ನೈತಿಕತೆಯ ತಳಹದಿ. ಈ ಬಗೆಯ ಚಿಂತನೆಗಳು ವಿವೇಕಾನಂದರ ವೈಚಾರಿಕ ಬುದ್ಧಿಗೆ ತೃಪ್ತಿಯನ್ನು ನೀಡಿದವು, ಮತ್ತು ಸಂಶಯವಾದ ಹಾಗೂ ಜಡವಾದಗಳಿಂದ ಹೊರಬರಲು ಸಹಾಯ ಮಾಡಿದವು. ಇದರಿಂದ ಅವರ ಜೀವನಕ್ಕೆ ಒಂದು ಹೊಸ ನಿರ್ದೇಶನವೂ ದೊರಕಿದಂತಾಯಿತು. ಆದರೆ ಇದು ಅವರಿಗೆ ಶಾಂತಿಯನ್ನು ನೀಡಲಿಲ್ಲ. ಈಗ ಸಂಘರ್ಷವು ಅವರ ಅಂತರಂಗದಾಳವನ್ನು ಪ್ರವೇಶಿಸಿತು. ವಿಶ್ವಚೈತನ್ಯದ ಅನುಭವವು ಮಹತ್ತರವಾದ ತ್ಯಾಗವನ್ನು ಅಪೇಕ್ಷಿಸುತ್ತಿತ್ತು. ಅವರಲ್ಲಿ ಕವಿ ಹೃದಯವಿತ್ತು, ಇಂದ್ರಿಯಗಳು ಚುರುಕಾಗಿದ್ದವು, ಯೌವ



ಬ್ರಜೇಂದ್ರನಾಥ ಸೀಲ್

ನದ ಉತ್ಸಾಹ ಮತ್ತು ಮಹತ್ವಾಕಾಂಕ್ಷೆಗಳು ಅವರಲ್ಲಿ ಕುದಿಯುತ್ತಿದ್ದವು. ಅವರದು ಹಾಸ್ಯಮಯ ಉಲ್ಲಾಸಭರಿತ ಜೀವನ — ಇವೆಲ್ಲವನ್ನೂ ಅವರು ಬದಿಗೊತ್ತಬೇಕಾಗಿತ್ತು, ಆ ಪರಮ ಸತ್ಯವನ್ನು ಅರಸಲು. ಇವುಗಳನ್ನೆಲ್ಲ ಬಿಟ್ಟುಬಿಡುವುದೆಂದರೆ ತಮ್ಮ ಸ್ವಾಭಾವಿಕತೆಯನ್ನೂ ಸ್ವಂತಿಕೆಯನ್ನೂ ಕಳೆದುಕೊಂಡಂತಾಗುತ್ತಿತ್ತು. ಈ ಹೋರಾಟ ಅನತಿ ಕಾಲದಲ್ಲಿಯೇ ನೈತಿಕ ಹೋರಾಟವಾಗಿ — ಬುದ್ಧಿಭಾವಗಳ ನಡುವಿನ ಘೋರ ಸಮರವಾಗಿ ಪರಿಣಮಿಸಿತು. ಇಂದ್ರಿಯಾಕರ್ಷಣೆಗಳು, ಮತ್ತು ಯೌವನಸಹಜ ಬಯಕೆಗಳು ಅವರಿಗೀಗ ಅಪವಿತ್ರವಾಗಿಯೂ ಅತ್ಯಂತ ಕೀಳಾಗಿಯೂ ಕಾಣತೊಡಗಿದವು. ಈ ಅವಧಿಯು ಅವರ ಜೀವನದಲ್ಲಿ ಗಾಢಾಂಧಕಾರದ ಪರೀಕ್ಷಾ ಸಮಯವಾಗಿತ್ತು. ಅವರ ಸಂಗೀತ ಪ್ರತಿಭೆಯು ಅನೇಕರನ್ನು ಅವರೆಡೆಗೆ ಆಕರ್ಷಿಸುತ್ತಿತ್ತು; ಆದರೆ ಅವರ ರೀತಿನೀತಿಗಳು ವಿವೇಕಾನಂದರಲ್ಲಿ ಅಸಹ್ಯವನ್ನುಂಟುಮಾಡುತ್ತಿದ್ದವು. ಆದರೆ ಅವರ ಉಲ್ಲಾಸ ಮನೋಭಾವ ಅಂಥವರಿಂದ ದೂರವಿರಲೂ ಅವರನ್ನು ಬಿಡುತ್ತಿರಲಿಲ್ಲ. ಆದ್ದರಿಂದ ಸಂಜೆ ಸಂಗೀತಗೋಷ್ಠಿಗಳಿಗೆ ನಾನು ಆಗಾಗ ಅವರೊಡನೆ ಹೋಗುತ್ತಿದ್ದುದು ಅವರಿಗೆ ಎಷ್ಟೋ ಸಮಾಧಾನವನ್ನುಂಟುಮಾಡುತ್ತಿತ್ತು.

ನಾನು ಅವರ ಸ್ವಭಾವದಲ್ಲಿ ಔನ್ನತ್ಯವನ್ನೂ ನಿಷ್ಠೆಯನ್ನೂ ಪವಿತ್ರತೆಯನ್ನೂ ಗುರುತಿಸಿದೆ. ಅವರಲ್ಲಿ ಯಾವಾಗಲೂ ಉತ್ಸಾಹ ತುಂಬಿಕೊಳ್ಳುತ್ತಿತ್ತು, ಅವರು ತುಂಬ ಸಂವೇದನಾಶೀಲರೂ ಆಗಿದ್ದರು. ಆದರೆ ಅತಿಕಟ್ಟುನಿಟ್ಟಿನ ಹಠಮಾರಿ ಸ್ವಭಾವದವರೂ ಆಗಿರಲಿಲ್ಲ. ಅವರು ತಮ್ಮ ಆರೋಗ್ಯದ ವಿಷಯದಲ್ಲಿ ಅತಿಕಾಳಜಿಯುಳ್ಳವರೂ ಆಗಿರಲಿಲ್ಲ. ಕಟುವಾಗಿಯೂ ವ್ಯಂಗ್ಯವಾಗಿಯೂ ಗೇಲಿಮಾಡುವ ಸ್ವಭಾವ ಅವರದಾದರೂ, ನನ್ನ ಮುಗ್ಧತೆ ಅದಕ್ಕೆ ಹೊರತಾಗಿತ್ತು. ಕುರುಡು ಸಂಪ್ರದಾಯಗಳನ್ನು ಅವಹೇಳನ ಮಾಡುವುದೇ ಅವರಿಗೊಂದು ಮೋಜಾಗಿತ್ತು. ಆಗ ಅವರು ಬೇರೆ ರೀತಿಯ ವ್ಯಕ್ತಿಯೇ ಆಗಿಬಿಡುತ್ತಿದ್ದರು. ಅವರ ನಿಕಟವರ್ತಿಗಳ ವಲಯದಿಂದ ಹೊರಗಿರುವರಿಗೆ ಆಶ್ಚರ್ಯವೂ ಗೊಂದಲವೂ ಉಂಟಾಗುವಂತೆ ಮಾಡುತ್ತಿದ್ದರು. ಆದರೆ ಅವರ ಅಂತರಂಗದಲ್ಲಿ ಮಾತ್ರ ಮಾಯಾಕರ್ಷಣೆಗಳ ವಿರುದ್ಧ ಮಹಾ ಹೋರಾಟ ನಡೆಯುತ್ತಿತ್ತು.

ಬಂಧನದಿಂದಲೂ ಕೊನೆಯಿಲ್ಲದ ಹೋರಾಟದಿಂದಲೂ ಬಿಡುಗಡೆ ಮಾಡುವ ಒಂದು ಶಕ್ತಿಯನ್ನು ಅವರು ಎಡೆಬಿಡದೆ ಅರಸುತ್ತಿದ್ದರು. ಇದಕ್ಕೆ ಉತ್ತರವಾಗಿ ನಾನು ಶುದ್ಧಚೈತನ್ಯದ ಸಾರ್ವಭೌಮತ್ವವನ್ನೂ ಅದರೊಡನೆ ಜೀವಾತ್ಮನ ತಾದಾತ್ಮ್ಯವನ್ನೂ ಸೂಚಿಸಬಲ್ಲವನಾಗಿದ್ದೆ, ಅಷ್ಟೇ. ಆ ದಿನಗಳಲ್ಲಿ ಪ್ಲೇಟೋನ ಅತೀತವಾದವೇ (transcendentalism) ನನ್ನ ಪಾಲಿಗೆ ಪರಮೋಚ್ಚವಾಗಿತ್ತು. ಹತೋಟಿಗೆ ಮೀರಿದ ಪ್ರತಿಭಟನಾ ಮನೋಭಾವ ನನ್ನದಾಗಿರಲಿಲ್ಲ. ತನ್ನನ್ನು ತಾನೇ ಆಳುವುದನ್ನು ಬಿಟ್ಟು ಬಾಹ್ಯ ಸಹಾಯಕ್ಕೆ ಕೈಯೊಡ್ಡುವುದಾಗಲಿ, ಯಾವುದೇ ಶಕ್ತಿಯ ಅನುಗ್ರಹಕ್ಕೆ ಶರಣಾಗುವುದಾಗಲಿ ನನ್ನ ಮನೋಭಾವಕ್ಕೆ ವಿರುದ್ಧವಾಗಿತ್ತು. ಈ ಜ್ಞಾನಮಾರ್ಗದಲ್ಲಿ ಭಾವದ ಆವಶ್ಯಕತೆಯಿದೆ ಎಂದು ನನಗನಿಸಲಿಲ್ಲ. ಆತ್ಮನಿಷ್ಠವಾದ ವಿಭಕ್ತ ಇಚ್ಛೆಯ ಅನುಭವವೂ ನನಗಾಗಿರಲಿಲ್ಲ. ಆದರ್ಶ ಮತ್ತು ವಾಸ್ತವಗಳ ನಡುವಿನ ವೈರುಧ್ಯವನ್ನೂ ಪ್ರಕೃತಿ ಮತ್ತು ಚೈತನ್ಯಗಳ ನಡುವಿನ ವೈರುಧ್ಯವನ್ನೂ ವಸ್ತುನಿಷ್ಠವಾಗಿ ನಾನು ಆಗಲೇ ಅನುಭವಿಸಿದ್ದೆನು. ಮುಂದೆ ಅದು ವೈಯಕ್ತಿಕ ಅನುಭವವೂ ಆಯಿತು, ಆದರೆ ವಿವೇಕಾನಂದರಿಗಾದ ರೂಪದಲ್ಲಿ ನನಗಾಗಲಿಲ್ಲ. ಆ ಸಂದರ್ಭದಲ್ಲಿ ಅವರ ಸಮಸ್ಯೆಗಳು ನನ್ನವು ಆಗಿರಲಿಲ್ಲ, ಅಥವಾ ನನ್ನ ತೊಂದರೆಗಳು ಅವರವು ಆಗಿರಲಿಲ್ಲ.

ಬೌದ್ಧಿಕವಾಗಿ ತಾನು ಸಮಷ್ಟಿತತ್ತ್ವವನ್ನು ಒಪ್ಪಿಕೊಂಡರೂ ಹೃದಯ ಇನ್ನೂ ವೈಯಕ್ತಿಕ ಅಹಂ ಕಡೆಗೇ ವಾಲಿಕೊಂಡಿದೆ, ಅಷ್ಟೇ ಅಲ್ಲದೆ, ಶುಷ್ಕ ವಿಚಾರವು, ಎಷ್ಟೇ ಶ್ರೇಷ್ಠವಾದರೂ, ಪ್ರಲೋಭನೆಯ ಸಮಯದಲ್ಲಿ ತನ್ನನ್ನು ರಕ್ಷಿಸಲಾರದು — ಎಂಬ ಚಿಂತನೆಗಳು ವಾಸ್ತವರೂಪದಲ್ಲಿ ತನ್ನನ್ನು ರಕ್ಷಿಸಬಲ್ಲವೇ, ಮಾನವರೂಪದಲ್ಲಿ ಬಂದು ತನ್ನನ್ನೂ ಹಿಡಿದೆತ್ತಬಲ್ಲವೇ — ಎಂಬುದು ಅವರ ಪ್ರಶ್ನೆಯಾಗಿತ್ತು. ತನ್ನನ್ನು ಕೈಹಿಡಿದು ರಕ್ಷಿಸುವ ಮಹಾಶಕ್ತಿಯೊಂದಕ್ಕಾಗಿ ಅವರು ಹಾತೊರೆಯುತ್ತಿದ್ದರು. ತನ್ನ ಕ್ಲೈಬ್ಯವನ್ನು ತೊಲಗಿಸಿ, ತನ್ನ ಆಂತರಿಕ ಶೂನ್ಯತೆಯನ್ನು ಧನ್ಯತೆಯ ಭಾವದಿಂದ ತುಂಬುವ, ಆಂತರಿಕ ಕೋಲಾಹಲವನ್ನು ನೀಗಿಸುವ ಶ್ರೇಷ್ಠ ಗುರುವಿಗಾಗಿ ಅವರು ತವಕಿಸುತ್ತಿದ್ದರು.

ಆ ಸಂದರ್ಭದಲ್ಲಿ ನನಗೆ ಇದು ಅವಿಚಾರಿತ ದೌರ್ಬಲ್ಯವಾಗಿ ಕಂಡುಬಂದಿತು. ಈ ರೀತಿ ಹೊರಗಿನ ಭೌತಿಕ ಆಲಂಬನೆಯನ್ನು (ಒಂದು ವ್ಯಕ್ತಿಯ ರೂಪದಲ್ಲಿ) ಬಯಸುವುದು ವಿಚಾರವನ್ನು ಇಂದ್ರಿಯಗಳಿಗೆ ಬಲಿಕೊಟ್ಟಂತೆ ಎಂದೆನಿಸಿತು. ಹೋರಾಡುತ್ತಿರುವ ಆತ್ಮದ ಈ ರೀತಿಯ ಬಯಕೆಯನ್ನು ನನ್ನ ಅನನುಭವಿ ಆತ್ಮವು ವಿರೋಧಿಸಿತು. ತಮ್ಮ ಈ ಬಯಕೆಯನ್ನು ಪೂರ್ತಿಗೊಳಿಸುವವರಾರೆಂದು ವಿವೇಕಾನಂದರು ವ್ಯಾಕುಲತೆಯಿಂದ ಅರಸುತ್ತಿದ್ದರು. ಈ ಅರಸುವಿಕೆ ಅವರನ್ನು ಬ್ರಹ್ಮಸಮಾಜದ ಬೋಧಕರನ್ನೆಲ್ಲ ಸಂಧಿಸುವಂತೆ ಮಾಡಿತು. ಅವರಲ್ಲಿ ವಿವೇಕಾನಂದರು ಬಯಸುತ್ತಿದ್ದುದು ಸತ್ಯಾನುಭವದ ನೇರ ಸ್ಪರ್ಶವನ್ನು, ತಮ್ಮನ್ನುದ್ಧರಿಸುವ ನಿಜವಾದ ಶಕ್ತಿಯನ್ನು, ಕೇವಲ ತೋರಿಕೆಯ ಸಾಂತ್ವನದ ನುಡಿಗಳನ್ನಲ್ಲ. ಅಲ್ಲಿ ಅವರು ಕೇಳುತ್ತಿದ್ದ ನೈತಿಕ ಪ್ರವಚನಗಳು, ತತ್ತ್ವ

ಗಳು ಇತ್ಯಾದಿಗಳೆಲ್ಲ ಅವರಿಗೆ ಸಪ್ಪೆಯಾಗಿದ್ದವು, ಅವರು ಅದರಲ್ಲಿ ರುಚಿಯನ್ನು ಕಳೆದುಕೊಂಡಿದ್ದರು. ಅವು ಕೇವಲ ಮನಸ್ಸಿನ ಆಹಾರವಾಗಿದ್ದವು, ಜೀವದ ಹಸಿವನ್ನು ನೀಗಿಸುವಂತಿರಲಿಲ್ಲ. ಅವರು ವಿವಿಧ ಗುರುಗಳನ್ನು ಸಂದಿಸಿದರು, ವಿವಿಧ ಮತಪಂಥ ಗಳನ್ನು ಕೆದಕಿ ನೋಡಿದರು. ಈ ಅನ್ವೇಷಣೆಯು ಕೊನೆಯಲ್ಲಿ ಅವರನ್ನು ದಕ್ಷಿಣೇಶ್ವರದ ಪರಮಹಂಸರ ಮುಂದೆ ತಂದು ನಿಲ್ಲಿಸಿತು. ಮೊದಲು ಅವರು ಸಂಶಯ ದೃಷ್ಟಿಯಿಂದಲೇ ಪರಮಹಂಸರನ್ನು ಸಂಧಿಸಿದರು ಎಂಬುದು ನಿಜ. ಪರಮಹಂಸರಷ್ಟು ಅಧಿಕಾರವಾಣಿಯಿಂದ ಮಾತನಾಡಿದವರಾರನ್ನೂ ಅವರು ಸಂಧಿಸಿರಲಿಲ್ಲ. ಪರಮಹಂಸರ ಶಕ್ತಿ ಅವರಾತ್ಮಕ್ಕೆ ಶಾಂತಿಯನ್ನು ನೀಡಿತು. ಅವರ ಅಂತರಂಗದ ಗಾಯವನ್ನು ಗುಣಪಡಿಸಿತು. ಆದರೆ ಅವರ ಆಂದೋಲನಕಾರ ಬುದ್ಧಿಯು ಪರಮಹಂಸರನ್ನು ಇನ್ನೂ ಒಪ್ಪಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಪರಮಹಂಸರ ಸನ್ನಿಧಿಯಲ್ಲಿ ತಾನು ಪಡೆಯುತ್ತಿರುವ ಶಾಂತಿಯು ಒಂದು ಭ್ರಮೆಯಾಗಿರಬಹುದು ಎಂದು ಅವರು ಸಂದೇಹಿಸಿದರು. ಆದರೆ ಈ ಸಂದೇಹ ಬಹುಕಾಲ ಉಳಿಯಲಿಲ್ಲ. ಪರಮಹಂಸರ ಪ್ರತ್ಯಕ್ಷಾನುಭವವು ಅವರ ತೀಕ್ಷ್ಣಬುದ್ಧಿಯ ಸಂದೇಹಗಳನ್ನೆಲ್ಲ ನಾಶಗೊಳಿಸಿತು.

ನನ್ನ ಕಣ್ಮುಂದೆಯೇ ಅವರಲ್ಲುಂಟಾಗುತ್ತಿದ್ದ ಪರಿವರ್ತನೆಯನ್ನು ನಾನು ಅತ್ಯಾಸಕ್ತಿಯಿಂದ ವೀಕ್ಷಿಸುತ್ತಿದ್ದೆ. ನನ್ನಂತೆಯೇ ಒಮ್ಮೆಗೇ ವೇದಾಂತಿಯೂ ಹೆಗೆಲ್ ಅನುಯಾಯಿಯೂ ಕ್ರಾಂತಿಕಾರಿಯೂ ಆದ ಯುವಕನೊಬ್ಬನು ಕಾಳೀಪೂಜೆಯ ಧಾರ್ಮಿಕ ಸಂಪ್ರದಾಯದ ಕಡೆ ವಾಲಿದುದು ಆಶ್ಚರ್ಯವೇ. ಆದರೆ ಇದಕ್ಕಿಂತಲೂ ಆಶ್ಚರ್ಯವಾದ ಸಂಗತಿಯೇನೆಂದರೆ: ಎಲ್ಲ ಸಂಪ್ರದಾಯಗಳನ್ನೂ ಹಳಿಯುವ ಸ್ವತಂತ್ರಚಿಂತಕರಾದ ವಿವೇಕಾನಂದರಂತಹವರು, ರಚನಾತ್ಮಕವೂ ಆದಮ್ಯವೂ ಆದ ಬುದ್ಧಿಶಕ್ತಿಯುಳ್ಳ ಅವರು ತುಂಬ ಅಸಹಜವೂ ರಹಸ್ಯಾತ್ಮಕವೂ ಆದ ವಿಚಾರಧಾರೆಯ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿರುವುದು ಆಗಿನ ಸಂದರ್ಭದಲ್ಲಿ ನನಗೆ ದಿಗ್ಭ್ರಮೆಯನ್ನುಂಟುಮಾಡಿತು. ನನ್ನ ತಾತ್ತ್ವಿಕ ಸಿದ್ಧಾಂತಕ್ಕೆ ಅದೊಂದು ಒಗಟಾಗಿ ಉಳಿಯಿತು. ನಾನು ಪಕ್ಷಾಂತರವೆಂದೇ ಪರಿಗಣಿಸಿದ ಅವರ ಈ ಕಾರ್ಯ ನನಗೆ ತೀವ್ರ ವ್ಯಥೆಯನ್ನು ಉಂಟುಮಾಡಿತು. ಅದು ಎಷ್ಟಾದರೂ ನನ್ನ ವೈಯಕ್ತಿಕ ಭಾವ. ನಮ್ಮದೇ ಆದ ಯಾವುದೋ ಅಭಿಪ್ರಾಯಕ್ಕೆ ನಾವು ಕಟ್ಟುಬಿದ್ದಾಗ ಅದಕ್ಕೆ ವಿರುದ್ಧವಾದುದು ನಮಗೆ ಅಸಹ್ಯವಾಗುತ್ತದೆ. ಅವರೊಡನೆ ನನ್ನ ವೈಯಕ್ತಿಕ ಸಂಬಂಧ ಎಷ್ಟು ಗಾಢವಾಗಿತ್ತೆಂದರೆ, ಅದು ನನ್ನನ್ನು ದಕ್ಷಿಣೇಶ್ವರಕ್ಕೆ ಸೆಳೆದುಕೊಂಡುಹೋಯಿತು. ವಿವೇಕಾನಂದರ ಗುರುವನ್ನು ನೋಡಿ, ಅವರ ಮಾತನ್ನು ಕೇಳಿ, ಇಡೀ ದಿನ ಆ ಪ್ರಶಾಂತ ವಾತಾವರಣದಲ್ಲಿ ಕಾಲಕಳೆಯುವಂತಾಯಿತು. ಸೂರ್ಯಾಸ್ತಮದ ಸಮಯದಲ್ಲಿ ಹಿಂದಿರುಗುವಾಗ ಮನಸ್ಸಿನಲ್ಲಿ ದೊಡ್ಡ ಬಿರುಗಾಳಿಯೇ ಉಂಟಾಗಿತ್ತು. ಒಂದು ರೀತಿಯ ನೈತಿಕ ಹಾಗೂ ಭೌತಿಕ ದಿಗ್ಭ್ರಮೆಯೊಂದಿಗೆ ನಾನು ಹಿಂದಿರುಗಿದೆ. ಅವ್ಯವಸ್ಥೆಯ ಹಿಂದೆಯೂ ಒಂದು ವ್ಯವಸ್ಥೆ ಇರಬಹುದು, ಆತ್ಮ-ಪರಕೀಯತೆಯಲ್ಲಿಯೂ ಸ್ವಸಂಕಲ್ಪದ ಸಾಧ್ಯತೆ, ಇಂದ್ರಿಯದೋಷಗಳೂ ಕೂಡ ವಿಚಾರದ ಪ್ರಾರಂಭಾವಸ್ಥೆಯಾಗಿರಬಹುದು ಮತ್ತು ನಮ್ಮನ್ನು ಉದ್ಧಾರಮಾಡುವ ಶಕ್ತಿಯೊಂದರಲ್ಲಿ ಶ್ರದ್ಧೆಯು ಸ್ವಸಂಕಲ್ಪದ ಮೂಲದಿಂದಲೇ ಹುಟ್ಟಿರಬಹುದು — ಈ ಬಗೆಯ ಚಿಂತನೆಗಳು ಆಗ ನನ್ನ ಮನಸ್ಸನ್ನು ಆವರಿಸಿಕೊಂಡಿದ್ದವು. ವಿವೇಕಾನಂದರ ಮುಂದಿನ ಜೀವನ ಚರಿತ್ರೆ ಈ ಚಿಂತನೆಗಳಿಗೆ ಸಮರ್ಥನೆಯನ್ನು ನೀಡಿತು. (ಸ್ವಪ್ರಯತ್ನ ಮತ್ತು ದೈವಾನುಗ್ರಹ - ಇವೆರಡರ ಸಾಮರಸ್ಯ ಮೇಲಿನ ಚಿಂತನೆಗಳ ಒಟ್ಟು ಸಾರಾಂಶ). ವಿವೇಕಾನಂದರು ತಮ್ಮ ಗುರುವಿನ ಉದ್ಧಾರಕ ಅನುಗ್ರಹವನ್ನೂ ಶಕ್ತಿಯನ್ನೂ ಪಡೆದುಕೊಂಡು ವಿಶ್ವಮಾನವ ಭಾವನೆಯನ್ನೂ ಆತ್ಮನ ನಿರಂಕುಶ ಸಾರ್ವಭೌಮತ್ವವನ್ನೂ ಜಗತ್ತಿನಾದ್ಯಂತ ಬೋಧಿಸಿದರು.

## ಯುವಚೇತನ



“ನಮಗೆ ಇಂದು ಬೇಕಾಗಿರುವುದೇ ಆತ್ಮನಿಗೆ ಸಂಬಂಧಪಟ್ಟ ಮಹಾಭಾವನೆ, ಅದರ ಅನಂತ ಶಕ್ತಿ, ಪರಿಶುದ್ಧತೆ ಮತ್ತು ಪರಿಪೂರ್ಣತೆ. ನನಗೆ ಒಂದು ಮಗುವಿದ್ದರೆ ಅದು ಹುಟ್ಟಿದಾಗಿನಿಂದಲೂ ಅದಕ್ಕೆ “ನೀನು ಪರಿಶುದ್ಧಾತ್ಮ” ಎಂದು ಹೇಳುತ್ತಿದ್ದೆ. ಪುರಾಣದಲ್ಲಿ ಬರುವ ರಾಣಿ ಮದಾಲಸೆಯ ಸುಂದರವಾದ ಕಥೆಯನ್ನು ನೀವು ಕೇಳಿರಬಹುದು. ಅವಳಿಗೆ ಮಗುವಾದ ತಕ್ಷಣವೇ ತೊಟ್ಟಿಲಲ್ಲಿ ಇಟ್ಟು ತೂಗುವಾಗ, “ನೀವು ಪರಿಶುದ್ಧಾತ್ಮ, ಕಳಂಕರಹಿತ, ಪಾಪದೂರ, ಶಕ್ತಿಶಾಲಿ, ಪರಮಶ್ರೇಷ್ಠ” ಎಂದು ಹಾಡುತ್ತಿದ್ದಳು. ಅದರಲ್ಲಿ ತುಂಬಾ ಸತ್ಯವಿದೆ. ನೀವು ಶ್ರೇಷ್ಠರೆಂದು ಭಾವಿಸಿ, ಶ್ರೇಷ್ಠರಾಗುವಿರಿ.

“ನಮಗೆ ಮಾಡಲು ಅಸಾಧ್ಯವಾಗಿ ಇರುವುದು ಯಾವುದಿದೆ? ಏನನ್ನುಬೇಕಾದರೂ ಸಾಧಿಸಬಲ್ಲೆವು. ನಮ್ಮಲ್ಲಿ ಎಲ್ಲರಲ್ಲಿಯೂ ಪರಂಜ್ಯೋತಿಯಾದ ಆತ್ಮನಿರುವನು. ಇದನ್ನು ನಂಬೋಣ. ನಚಿಕೇತನಿಗಿದ್ದಂತಹ ಶ್ರದ್ಧೆ ಇರಲಿ. ತಂದೆ ಯಜ್ಞ ಮಾಡುತ್ತಿದ್ದಾಗ ನಚಿಕೇತನಿಗೆ ಶ್ರದ್ಧೆ ಬಂತು. ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಅಂತಹ ಶ್ರದ್ಧೆ ಬರಲಿ. ವೀರರಂತೆ, ಧೀರರಂತೆ ನಿಂತು, ಪ್ರಚಂಡ ಬುದ್ಧಿಶಕ್ತಿಯಿಂದ ದೇವರಂತೆ ನೀವು ಜಗಚ್ಚಾಲಕರಾಗಿ ಎಂದು ನಾನು ಆಶಿಸುತ್ತೇನೆ. ಉಪನಿಷತ್ತಿನಿಂದ ದೊರಕುವ ಶಕ್ತಿ ಇದು, ಶ್ರದ್ಧೆ ಇದು.” *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೩, ಪು.೧೨೦-೨೨)*